ಅಯೋಧ್ಯೆ ವಿಚಾರ ತಂದರು. ನೀವು ಮಸೀದಿ ಒಡೆಯಲು ಹೊರಟಿದ್ದೀರಿ ಎಂದು ಹೇಳಿದರು. ನಾನು ಆ ಬಗ್ಗೆ ಪ್ರಸ್ತಾಪ ಮಾಡಿಲ್ಲ. ಅದರ ಬಗ್ಗೆ ಚರ್ಚೆ ಮಾಡುವುದಾದರೆ ಬೇರೆ ಸಂದರ್ಭದಲ್ಲಿ ಮಾಡೋಣ. ಮಾನ್ಯ ರಂಗನಾಥ್ ಅವರು ಆ ಸಂದರ್ಭದಲ್ಲಿ ಇರಲಿಲ್ಲ. ಇವತ್ತು ಯಾವ ರೀತಿ ನಡೆದುಕೊಳ್ಳಬೇಕು, ಯಾವ ರೀತಿ ಗೌರವ ತೆಗೆದುಕೊಳ್ಳಬೇಕು, ಸದಸ್ಯನಾಗಿ ಯಾವ ರೀತಿ ನಡೆದುಕೊಳ್ಳಬೇಕು ಎನ್ನುವುದಕ್ಕೆ ಇವತ್ತು ರೆಕಾರ್ಡ್ಸ್ ಇದೆ. ಇವತ್ತು ಬೆಳಿಗ್ಗೆ ಯಾವ ರೀತಿ ನಡೆದುಕೊಂಡೆವು ಎಂದು ತಾವು ನೋಡಿದ್ದೀರಿ. ಇದರ ಬಗ್ಗೆ ಚರ್ಚೆಯಾಗಬೇಕಾಗುತ್ತದೆ. ಆದರೆ ಒಂದು ಮಾತನ್ನು ಹೇಳುತ್ತೇನೆ. ಇವತ್ತು ಸದನದ ಸಮಯ ಹಾಳು ಮಾಡುವುದಕ್ಕೆ ನಾವು ಸಿದ್ದರಿಲ್ಲ. ಒಂದೊಂದು ನಿಮಿಷವೂ ಉಪಯೋಗವಾಗಬೇಕು ಎನ್ನುವ ಕಳಕಳಿ ಇರತಕ್ಕ ವ್ಯಕ್ತಿಗಳು ನಾವು. ನಾನು ಸರ್ಕಾರಕ್ಕೆ ಹೇಳುತ್ತೇನೆ. ನೀವು ನಡೆದುಕೊಳ್ಳುತ್ತಾ ಇರತಕ್ಕ ಈ ಪದ್ಧತಿ ಸರಿಯಿಲ್ಲ, ಈ ಪ್ರವೃತ್ತಿ ಸರಿಯಲ್ಲ. ವಿನಾಕಾರಣ ಬಿಜೆಪಿ ಕಾರ್ಯಕರ್ತರನ್ನು ಏನು ಬಂಧನ ಮಾಡಿದ್ದೀರೋ ಅವರಲ್ಲಿ ಕ್ಷಮಾಪಣೆ ಕೇಳಿ ತಾವು ಬಿಡುಗಡೆ ಮಾಡಬೇಕೆಂದು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ. ಮತ್ತೆ ಈ ಸದನದ ಕಾರ್ಯಕಲಾಪಗಳು ಸುಲಲಿತವಾಗಿ ನಡೆಯಲಿ. ನಾವು ಅಡ್ಡಿ ಮಾಡುವುದಿಲ್ಲ. ನಾವು ಈ ಒಂದು ವಿಚಾರದ ಬಗ್ಗೆ ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತೇವೆ. ಅವರು ನಡೆಸಿಕೊಂಡು ಹೋಗಲಿ, ಚಿಂತೆ ಇಲ್ಲ.

(ಈ ಸಮಯದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು).

ಡಾ. ಜೀವರಾಜ ಆಳ್ವ:– ಮಾನ್ಯ ಯಡಿಯೂರಪ್ಪನವರು ಮಾತನಾಡಿದಾಗ ನಾನು ಇದ್ದೆ.

ಅಧ್ಯಕ್ಷರು:– ಆ ಪ್ರಸ್ತಾವನೆ ಇಲ್ಲಿಗೆ ಮುಕ್ತಾಯವಾಗಿದೆ. ತಾವು ಕುಳಿತುಕೊಳ್ಳಬೇಕು. ಮತ್ತೆ ಮಾನ್ಯ ವಾಟಾಳ್ ನಾಗರಾಜ್ ಅವರು ಏನೋ ಪ್ರಸ್ತಾಪ ಮಾಡಬೇಕೆಂದಿದ್ದಾರೆ. ಅವರು ಪ್ರಸ್ತಾಪ ಮಾಡಲಿ.

3. ಸಮಾನಾಂತರ ಕಾಲುವೆ ವಿಚಾರ

†ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಪಡೆದು ನಿನ್ನೆಯ ದಿವಸ ನಾನು ಸಮಾನಾಂತರ ಕಾಲುವೆ ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪ ಮಾಡಿದೆ. ತಾವು ಅದಕ್ಕೆ ಅವಕಾಶವನ್ನು ಕೊಟ್ಟರಿ. ನಾನು ಈ ಸದನದ ಯಾವ ಒಬ್ಬ ವ್ಯಕ್ತಿಯ ಹೆಸರನ್ನೂ ಎತ್ತಿಲ್ಲ. ತಾವು ಕಡತವನ್ನು ತರಿಸಿ ನೋಡಿ. ನಾನು ಯಾರೇ ಒಬ್ಬರ ಹೆಸರು, ಇಂತಹ ಶಾಸಕರ ಮನೆಗೆ ಇಂತಹ ಸಚಿವರು ಬಂದಿದ್ದರು ಎಂದು ಹೇಳಲಿಲ್ಲ. ಅದಕ್ಕೆ ಪಾಪ ಇನ್ನೊಬ್ಬ ಶಾಸಕರು ಇದ್ದರು, ನಾನು ಮಾಡಿಲ್ಲ ಎಂದರು. ಅದು ಅಲ್ಲಿಗೆ ಮುಗಿಯಿತು. ಈ ಪ್ರಸಂಗ ಆಗಿದೆ. ಸಮಾನಾಂತರ ಕಾಲುವೆ ಬಗ್ಗೆ ಪಿತೂರಿ ಆಗುತ್ತಿದೆ, ನಮ್ಮ ಗಡಿ ಪ್ರದೇಶಕ್ಕೆ ಅಲ್ಲಿಯ ಸಚಿವರು ಬಂದಿದ್ದರು, ಕೆಲವರನ್ನು ಭೇಟಿ ಮಾಡಿದ್ದಾರೆ, ಇದಕ್ಕೆ ಸತ್ಯಾಂಶದ ಬಗ್ಗೆ ಸರ್ಕಾರದ ನಿಲುವು ಏನು ಎನ್ನುವುದನ್ನು ತಿಳಿಸಿರಿ ಎಂದು ನಾನು ಸ್ಪಷ್ಟವಾಗಿ ಹೇಳಿದೆ. ಇದರ ಬಗ್ಗೆ ನಾನು ಒಬ್ಬನೇ ಅಲ್ಲ, ಮಾನ್ಯ ಚಂದ್ರೇಗೌಡರೂ ಮಾತನಾಡಿದರು, ದೇಶಪಾಂಡೆಯವರ ಮಾತನಾಡಿದರು. ಸಿಂಧ್ಯಾ ಅವರು, ಪ್ರೊಫೆಸರ್ ನಂಜುಂಡಸ್ವಾಮಿಯವರು ಹಾಗೂ ಮಾನ್ಯ ಯಡಿಯೂರಪ್ಪನವರೂ ಮಾತನಾಡಿದರು.

ಅನೇಕ ಜನರು ಈ ಬಗ್ಗೆ ಮಾತನಾಡಿದರು. ಕೊನೆಗೆ ಮಾನ್ಯ ಉಪಮುಖ್ಯ ಮಂತ್ರಿಯವರು, ಇದಕ್ಕೆ ಸಮಜಾಯಿಸಿ ಹೇಳಿ, ನಾವು ಈ ಬಗ್ಗೆ ನಮ್ಮ ಕನ್ನಡನಾಡಿನ ನೆಲ, ಜಲದ ಬಗ್ಗೆ ಸ್ಪಷ್ಟವಾದ ನಿಲುವಿನಲ್ಲಿದ್ದೇವೆ, ಯಾರಿಗೂ ಅನ್ಯಾಯವಾಗುವುದಿಲ್ಲವೆನ್ನುವ ಮಾತನ್ನು ಹೇಳಿದರು. ಇದು ಇಷ್ಟಕ್ಕೆ ಮುಗಿಯಿತು ಸ್ವಾಮಿ. ಇವತ್ತು ನಾನು ಇಲ್ಲಿ ಬಂದು ಪ್ರಶ್ನೋತ್ತರ ಕಾಲದಲ್ಲಿ ಕುಳಿತೆ. ಶ್ರೀಮಾನ್